ಅವರು ಹಿಂಜರಿಯುತ್ತಿರಲಿಲ್ಲ.

ಗ್ರಾಹಕರಿಗೆ ಪರಿಮಳದ ಮೋಂಬತ್ತಿಗಳು ಬೇಕು ಎಂದು ತಿಳಿದಾಗ, ತಕ್ಷಣವೇ ಭಾವೇಶ್ ಎನ್.ಎ.ಬಿ.ಯ ಶಿಕ್ಷರಿಗೆ ಫೋನ್ ಮಾಡಿದರು. ಅವರಿಂದ ಪರಿಮಳದ ಮೋಂಬತ್ತಿಗಳು ಕೂಡಾ ಇವೆಯೆಂದು ತಿಳಿಯಿತು. ಹಾಗಾದರೆ ಅವನ್ನು ಮಾಡುವುದು ಹೇಗೆ? ಅವರ ಕೆಲವು ಗೆಳೆಯರಿಗೆ ಅಗರಬತ್ತಿ ತಯಾರಿಸುವ ತರಪೇತು ನೀಡಲಾಗಿತ್ತು. ಅವರಲ್ಲಿ ಅರೋಮಾ ಆಯಿಲ್ ಮಾರುವವರ ವಿಳಾಸ ಮತ್ತು ಫೋನ್ ನಂಬರ್ ಇದ್ದಿತು. ಇದೀಗ ಭಾವೇಶ್ ಮುಂಬಯಿಗೆ ಮತ್ತೆ ಓಡಿದರು. ಮಸ್ಜಿತ್ ಬಂದರ್, ಪ್ರಿನ್ಸೆಸ್ ಸ್ಟ್ರೀಟ್ ಮತ್ತು ಲೋಹಾರ್ ಚಾಲ್ ಹತ್ತಿರ ಅರೋಮಾ ಆಯಿಲ್‌ನ ಬಹಳಷ್ಟು ಅಂಗಡಿಗಳು ಇದ್ದವು. ಅವುಗಳಲ್ಲಿ 'ಕೇಲ್ಕರ್ ಫ್ರಾಗ್ರೆನ್ಸಸ್' ಮತ್ತು 'ಶ್ರೀಜೀ ಅರೋಮಾ' ಅಂಗಡಿ ಬಹಳಷ್ಟು ಪ್ರಸಿದ್ಧವಾಗಿದ್ದವು. ಈ ಅಂಗಡಿಗಳಿಗೆ ಹೋಗಿ ಹತ್ತುಹತ್ತು, ಇಪ್ಪತ್ತು ಇಪ್ಪತ್ತು ಗ್ರಾಮ್ ಮಲ್ಲಿಗೆ ಹಾಗೂ ಶ್ರೀಗಂಧದ ಎಣ್ಣೆಗಳನ್ನು ಕೊಂಡರು. 'ಶ್ರೀಜೀ ಅರೋಮಾ' ಅಂಗಡಿಯ ಮಾಲೀಕರ ಹೆಸರು ಕೂಡಾ ಭಾವೇಶ್ ಆಗಿತ್ತು! ಅವರೊಡನೆ ಮಾತನಾಡುತ್ತಾ ಗೆಳೆತನ ಕೂಡಿತು. ಅವರು ಒಳ್ಳೆಯ ಬೆಲೆಗೆ ಭಾವೇಶ್ ಅವರಿಗೆ ಪರಿಮಳದ ಎಣ್ಣೆಗಳನ್ನು ಕೊಟ್ಟರು. ಎಷ್ಟು ಪ್ರಮಾಣದಲ್ಲಿ ಎಣ್ಣೆಯನ್ನು ಮೇಣದೊಳಗೆ ಸೇರಿಸಬೇಕು, ಇದನ್ನೂ ಕೂಡಾ ಅವರಿಗೆ ಹೇಳಿಕೊಟ್ಟರು. ಅವರು 'ಬರೀ ಪರಿಮಳ ಅಷ್ಟೇ ಅಲ್ಲ, ಬಣ್ಣಗಳನ್ನೂ ಹಾಕು ನಿಮ್ಮ ಮೋಂಬತ್ತಿಗೆ' ಎಂದು ಸಲಹೆ ನೀಡಿದರು. ಎನ್.ಎ.ಬಿ.ಯಲ್ಲಿ ಭಾವೇಶ್ ಅವರಿಗೆ ಬ್ರೈಲ್ ತರಪೇತಿ ಸಿಕ್ಕಿತ್ತು. ಇದರ ಪ್ರಯೋಗ ಮಾಡಿ, ಬಣ್ಣಗಳನ್ನು ಗುರುತಿಸುವುದು ಸುಲಭವಿತ್ತು. ಅಬ್ದುಲ್ ಭಾಯಿ ಅವರಿಂದ ವಿವಿಧ ಬಣ್ಣಗಳ 50–50 ಗ್ರಾಮ್ ಪೊಟ್ಟಣಗಳನ್ನು ಖರೀದಿಸಿದರು. ಒಂದೊಂದು ಪೊಟ್ಟಣದ ಮೇಲೆ ಬ್ರೈಲ್‌ನಲ್ಲಿ ಅದರ ಬಣ್ಣವನ್ನು ಬರೆದು ಆ ಕಾಗದವನ್ನು ಪೊಟ್ಟಣದಲ್ಲಿ ಇಟ್ಟರು. ಆದರೆ ಅಬ್ದುಲ್ ಭಾಯಿ ಹತ್ತಿರ ಬಣ್ಣ ಎಷ್ಟು ಹಾಕಬೇಕು ಎಂದು ಕೇಳಿರಲಿಲ್ಲ. ಮೊದಲ ಬಾರಿ, ಬಣ್ಣ ತೀರಾ ಗಾಢವಾಗಿ ತಂದೆಯವರು 'ಅರೆ ಮೋಂಬತ್ತಿಗಳು ಕಪ್ಪು ಬಣ್ಣಕ್ಕೆ ತಿರುಗಿವೆಯಲ್ಲ' ಎಂದರು. ನಂತರ ಒಂದು ಕೆ.ಜಿ. ಮೇಣದಲ್ಲಿ ಸಣ್ಣ ಪ್ರಮಾಣದ ಬಣ್ಣ ಹಾಕಿದರೂ ಸಾಕು, ಬಣ್ಣ ಬರುತ್ತದೆ ಎಂದು ತಂದೆಯವರಿಂದ ಅರಿತರು. ತಂದೆಗೆ ತೋರಿಸಿ, ಯಾವ ಬಣ್ಣ ಸರಿಯಾಗಿ ಬಂದಿದೆ ಎಂದು ತಿಳಿದಾಗ, ಎಷ್ಟು ಪ್ರಮಾಣದಲ್ಲಿ ಬಣ್ಣವನ್ನು ಹಾಕಿದ್ದೆ ಎಂದು ನೆನಪಿಟ್ಟುಕೊಳ್ಳುವರು, ಬ್ರೈಲ್‌ನಲ್ಲಿ ಬರೆದಿಟ್ಟುಕೊಳ್ಳುವರು. ಅದೆಷ್ಟೋ ಪ್ರಯೋಗಗಳ ನಂತರ ಅವರ ಮೋಂಬತ್ತಿಗಳು ಆಕರ್ಷಕ ಬಣ್ಣಗಳನ್ನು ಪಡೆದಿದ್ದವು.

ಆ ಆರ್.ಕೆ.ವಾಡಿಯದ ಒಂದು ಕೋಣೆಯಲ್ಲಿ ನೆಲದ ಮೇಲೆಯೇ ಮೋಂಬತ್ತಿ ಮಾಡಬೇಕಿತ್ತು. ಭಾವೇಶ್ ಅವರ ಎತ್ತರ ಹೆಚ್ಚಿದ್ದ ಕಾರಣ, ಪ್ರತಿ ಬಾರಿ ನೆಲಕ್ಕೆ ಬಾಗಿ ಕೆಲಸ ಮಾಡುವುದು ಕಷ್ಟವಿತ್ತು. ಈಗೊಂದು ಮುರುಕಲು ಕುರ್ಚಿಯ ಮೇಲೆ ಅಚ್ಚು ಇಟ್ಟು ಮಾಡಲು ಆರಂಭಿಸಿದರು. ಆ ಕೋಣೆಯ ಮೂಲೆಗಿದ್ದ ಅಡುಗೆಮನೆಯಲ್ಲಿ ಮೇಣ ಕರಗಿಸಿ, ಬಣ್ಣ ಮತ್ತು ಪರಿಮಳವನ್ನು ಸೇರಿಸಿ, ಕುರ್ಚಿಯ ಮೇಲಿಟ್ಟ ಅಚ್ಚುಗಳ ಒಳಕ್ಕೆ ತುಂಬುತ್ತಿದ್ದರು. ಇಷ್ಟರಲ್ಲಿ ತಮ್ಮದೇ ಪ್ರಯೋಗಗಳಿಂದ ಅವರಿಗೆ ಅರಿವಾಗಿತ್ತು – ಮೇಣ ಬಿಸಿಯಾಗಿದ್ದಾಗ ಹೆಚ್ಚು ಹರಡುತ್ತದೆ, ತಣ್ಣಗಿದ್ದಾಗ ಕುಗ್ಗುತ್ತದೆ. ಹಾಗಾಗಿ, ಅಚ್ಚಿನ ಒಳಕ್ಕೆ ಮೇಣವನ್ನು ಮೂರ್ನಾಲ್ಕು ಬಾರಿ ಹಾಕಬೇಕಾಗುತ್ತಿತ್ತು. ಹಲವೊಮ್ಮೆ ಅಚ್ಚನ್ನು ಪೂರ್ತಿ ತುಂಬುವಾಗ ಮೇಣ ಹೊರಕ್ಕೆ ಹರಿದು ಮೊದಲು ಕುರ್ಚಿ ನಂತರ ನೆಲದ ಮೇಲೆ ಹರಡುತ್ತಿತ್ತು. ಇದರಿಂದ ನಷ್ಟವೂ ಆಗುತ್ತಿತ್ತು.

ಒಂದು ವಿಷಯ ಭಾವೇಶ್ ಅವರ ಮನಸ್ಸಿಗೆ ಬಂದಿತು. ಈ ಕೆಳಗೆ ಬಿದ್ದ ಮೇಣವನ್ನು ರಿಸೈಕಲ್ ಮಾಡಿ ಪುನರ್ ಬಳಸಬಹುದಲ್ಲ. ಈ ರೀತಿ ಅವರ ಕೆಲಸವೇ, ಅವರಿಗೆ ಕೆಲಸವನ್ನು ಕಲಿಸತೊಡಗಿತು. ಹೀಗೇ ಮುಂದುವರೆದು, ಪರಿಮಳದ, ಬಣ್ಣ ಬಣ್ಣದ, ವಿವಿಧ ಆಕಾರದ ಮೋಂಬತ್ತಿಗಳು, ಹೊಸ ಹೊಸ ಪ್ಯಾಕಿಂಗ್ ಮಾಡಿದ ಮೋಂಬತ್ತಿಗಳು ತಯಾರಾದವು. ದಿನವೊಂದಕ್ಕೆ ಸುಮಾರು 60 ಮೋಂಬತ್ತಿಗಳು ಸಿದ್ಧವಾಗತೊಡಗಿದವು. ಇವುಗಳ ಮಾರಾಟದಿಂದ ಮನೆಯ ಖರ್ಚು ವೆಚ್ಚ ಸಂಭಾಳಿಸತೊಡಗಿತು. ಒಂದಿಷ್ಟು ಹಣ ಉಳಿದಾಗ, ಅದನ್ನು ಮತ್ತೆ ತಮ್ಮ ಉದ್ಯಮವನ್ನು ಹಿಗ್ಗಿಸುವತ್ತ ತೊಡಗಿಸುವರು.

ತಂದೆಯ ಚಿಕ್ಕಪ್ಪನ ಮಗ ತುಷಾರ್ ಭಾಯ್ ಭಾಟಿಯಾ ಬಳಿ ಗುಜರಾತಿನ ವಾಪೀ ಎಂಬ ಜಾಗದಲ್ಲಿ ಬಹಳ ದೊಡ್ಡ ರಾಸಾಯನಿಕ ಕಾರ್ಖಾನೆ ಇತ್ತು. ತುಷಾರ್‌ಗೆ ಭಾವೇಶರನ್ನು ಕಂಡರೆ ಪ್ರೀತಿ ಮಮಕಾರವಿತ್ತು. ಅಂಧರಾದ ಭಾವೇಶ್ ಅವರ ಭವಿಷ್ಯಕ್ಕೆ ಏನಾದರೂ ಮಾಡಬೇಕು ಎಂಬ ಹಂಬಲವೂ ಮೂಡಿತು. ಒಮ್ಮೆ ಅವರು ಒಂದು ಟ್ರಸ್ಟ್ ಮಾಡಿ, ಅದರಲ್ಲಿ ಕೆಲವು ಲಕ್ಷ ರೂಪಾಯಿಗಳನ್ನು ಜಮಾ ಮಾಡಲು ಬಯಸಿದ್ದರು. ಅದರಿಂದ ಬರುವ ಬಡ್ಡಿಯಿಂದ, ಭಾವೇಶನಿಗೆ ಬದುಕಿನುದ್ದಕ್ಕೂ ಜೀವನೋಪಾಯ ಸಾಧ್ಯವಾಗುವುದು ಎಂದು ಹೇಳಿದ್ದರು. ಭಾವೇಶ್ ತಕ್ಷಣವೇ 'ಅರೆ, ಇದು ಆತ್ಮಹತ್ಯೆ ಮಾಡಿಕೊಂಡಂತೆ. ನಾನು ಜೀವನದುದ್ದಕ್ಕೂ ನಿಜವಾದ ಅರ್ಥದಲ್ಲಿ ಅಂಗವಿಕಲನಾಗಿ ಅಸಹಾಯಕನಾಗಿ ಉಪಯೋಗವಿಲ್ಲದೆ ಮೂಲೆಯಲ್ಲಿ ಕೂರುವಂತಾಗಿ ಬಿಡುತ್ತದೆ' ಎಂದು ಹೇಳಿ ಅವರ ಈ ದಾನವನ್ನು ಸಜ್ಜನಿಕೆಯಿಂದಲೇ ನಿರಾಕರಿಸಿದ್ದರು. ತುಷಾರ್ ಭಾಯ್ ಅವರು ಭಾವೇಶ್ ಅವರಿಗೆ ಹೇಗಾದರೂ ಸಹಾಯ ಮಾಡಲು ಬಯಸಿದ್ದರು. ಈಗ ಅವರು 50 ಕಿಲೋ ಮೇಣದ ಹತ್ತು ಚೀಲಗಳನ್ನು ಉಡುಗೊರೆಯಾಗಿ ಕಳುಹಿಸಿದರು.

ಸೆಪ್ಟೆಂಬರ್ 1995ರಿಂದ ಆರಂಭವಾಗಿತ್ತು ಭಾವೇಶ್ ಅವರ ಮೋಂಬತ್ತಿ ಉದ್ಯಮ. ಕೆಲವೇ ತಿಂಗಳುಗಳಲ್ಲಿ ಐವತ್ತಕ್ಕೂ ಹೆಚ್ಚು ಡಿಸೈನ್‌ಗಳನ್ನು ತಯಾರಿಸತೊಡಗಿದ್ದರು. ಆದರೆ ಕಳೆದ ಕೆಲವೇ ತಿಂಗಳಲ್ಲಿ ಅವರ ಬದುಕಿನಲ್ಲಿ ಎಷ್ಟೆಲ್ಲ ಬದಲಾವಣೆ ಆಗಿತ್ತು. ಯಾವ ಹೋಟೆಲಿನಲ್ಲಿ ಟೆಲಿಫೋನ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರೋ, ಅಲ್ಲಿ ಹೋಟೆಲಿನ ಸಿಬ್ಬಂದಿಗಳಿಗೆ ಕಚೇರಿಯ ಕಡೆಯಿಂದ ಠಾಕು ಠೀಕಾದ ಸೂಟು ಬೂಟು ಸಮವಸ್ತ್ರ ಕೊಡುತ್ತಿದ್ದರು. ಅಲ್ಲಿಯ ಮ್ಯಾನೇಜರ್ ಪ್ರತಿಯೊಬ್ಬ ಸಿಬ್ಬಂದಿಯೂ ಹೋಟೆಲಿನ ಪ್ರತಿನಿಧಿ ಆಗಿರಬೇಕೆಂದು ಬಯಸುತ್ತಿದ್ದರು. ಅಂದರೆ ಹೋಟೆಲಿನ ಕೆಲಸಗಳಿಗಾಗಿ, ಹೋಟೆಲಿನ ಗಾಡಿಯಲ್ಲಿ ಮಾರುಕಟ್ಟೆಗೆ ಹೋಗುವಾಗ, ಇಲ್ಲ ಮತ್ತ್ಯಾವುದೇ ಹೊರಗಿನ ಕೆಲಸಕ್ಕೆ ಹೊರಟಾಗ, ಇದೇ ಸೂಟು ಬೂಟು ಸಮವಸ್ತ್ರ ಹಾಕಿ ಹೋಗುವಂತೆ ಆಗ್ರಹಿಸುವರು. ಆ ಸಮವಸ್ತ್ರದ ಮೇಲೆ ಹೋಟೆಲಿನ ಹೆಸರು ಕೂಡಾ ಬರೆದಿತ್ತು. ಪ್ರವಾಸಿಗರ ಎದುರು ಹೋಟೆಲಿನ ಒಳ್ಳೆಯ ಇಮೇಜ್ ಕಾಣಬೇಕು ಎಂಬ ಕಾರಣಕ್ಕೆ ಈ ಸೂಚನೆಯನ್ನು ಎಲ್ಲ ಸಿಬ್ಬಂದಿಗೂ ತಿಳಿಸಲಾಗಿತ್ತು. ಅಷ್ಟೇ ಅಲ್ಲ, ಇದರ ಪಾಲನೆ ಕಡ್ಡಾಯವಿತ್ತು. ಬೇಸಿಗೆಯ ದಿನಗಳಲ್ಲೂ ಅದೇ ಸೂಟು ಬೂಟು ಹಾಕಿ ಮಾರುಕಟ್ಟೆಗೆ ಹೋಗಬೇಕಿತ್ತು. ಇದೇ ಮಾರ್ಕೆಟ್‌ಗೆ ಭಾವೇಶ್ ಸೂಟು ಬೂಟು ತೊಟ್ಟು ಹೋಟೆಲಿನ ಗಾಡಿಯಲ್ಲಿ ಬರುತ್ತಿದ್ದರು. ಇಂದು

## ಇಲ್ಲಿಯವರೆಗೆ



'ಎನ್.ಎ.ಬಿ.'ಯಲ್ಲಿ ಅಧಿಕೃತವಾಗಿ ಮಾಲೀಶಿನ ನೈಪುಣ್ಯವನ್ನೂ ಅನಧಿಕೃತವಾಗಿ ಮೋಂಬತ್ತಿ ತಯಾರಿಕೆಯ ಕೌಶಲ್ಯವನ್ನೂ ಭಾವೇಶ್ ಕಲಿತುಕೊಂಡರು. 'ಎನ್.ಎ.ಬಿ.'ಯ ಅತ್ಯುತ್ತಮ ವಿದ್ಯಾರ್ಥಿಯಾಗಿ ಹೊರಹೊಮ್ಮಿದ ಅವರು ಮಹಾಬಲೇಶ್ವರ ಮರಳಿ ದಾಗ ಮತ್ತೆ ಎದುರಾದುದು ಬದುಕಿನ ಜಟಕಾ ಬಂಡಿ. ತಂದೆಯನ್ನು ನೋಡಿಕೊಂಡು ಬದುಕನ್ನು ಕಟ್ಟಿಕೊಳ್ಳುವ ಸವಾಲು ಅವರ ಮುಂದಿತ್ತು. ಮಸಾಜ್ ಕಲೆ ಅನ್ನಕ್ಕೆ ದಾರಿಯಾದರೂ, ಅವರ ಮನಸ್ಸಿನಲ್ಲಿದ್ದುದು ಮೋಂಬತ್ತಿಯ ಬೆಳಕು. ಕೊನೆಗೂ ಮೋಂಬತ್ತಿ ತಯಾರಿಸಿ, ಮಹಾಬಲೇಶ್ವರದ ಮಾರುಕಟ್ಟೆಯಲ್ಲಿ ಭಾವೇಶ್‌ರ ಕೈಗಾಡಿಯ ಅಂಗಡಿ ಆರಂಭವಾಯಿತು. ಆ ಕೈಗಾಡಿ ಅಂಗಡಿಯೇ ಮುಂದಿನ ದಿನಗಳ ಹೆದ್ದಾರಿ ಪಯಣಕ್ಕೆ ಮುನ್ನುಡಿ ಬರೆದಿತ್ತು.